**<u>ದಿ:31.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

3. ದಾವಾ ಐಟಂ ನಂಬರ್ 1 ಆಸ್ತಿ ತಮ್ಮಣ್ಣ ಮತ್ತು ಅಣ್ಣಯ್ಯರವರಿಗೆ ಹೇಗೆ ಬಂದಿರುತ್ತದೆ ಎಂದು ಹೇಳಲು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಾನು ಖರೀದಿಸುವ ಸಮಯದಲ್ಲಿ ಆಸ್ತಿಗೆ ಸಂಬಂಧಿಸಿದ ಮ್ಯುಟೇಶನ್ ಮತ್ತು ಜಮಾಬಂದಿಯನ್ನು ನೋಡಿರುತ್ತೇನೆ. ದಾವಾ ಐಟಂ ನಂಬರ್ 1 ಆಸ್ತಿಗೆ ಸಂಬಂಧಿಸಿದಂತೆ 1992 ರ ಹಿಂದಿನ ಜಮಾಬಂದಿ ಮತ್ತು ಮ್ಯುಟೇಶನ್ ನನ್ನು ನಾನು ನೋಡಿರುವುದಿಲ್ಲ. ನಿಪಿ-6 ಮ್ಯುಟೇಶನ್ ಪ್ರಕಾರ ದಾವಾ ಐಟಂ ನಂಬರ್ 1 ನ್ನು ತಮ್ಮಯ್ಯ ಮತ್ತು ಅಣ್ಣಯ್ಯರವರು ಜಂಟಿಯಾಗಿ ಖರೀದಿಸಿರುವಂತಹ ಆಸ್ತಿಯಾಗಿರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ತಮ್ಮಯ್ಯ ಮತ್ತು ಅಣ್ಣಯ್ಯರವರ ಜಂಟಿ ಹೆಸರಿನಲ್ಲಿ ಮ್ಯುಟೇಶನ್ ಆಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ದಾವಾ ಐಟಂ ನಂಬರ್ 1 ರಿಂದ 3 ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಸುಮಾರು 13

ವರ್ಷಗಳ ಹಿಂದಿನ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಆ ಸಮಯದಲ್ಲಿ ನಾನು ಯಾವುದೆಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ ಎಂದು ಹೇಳಲು ನನಗೆ ಈಗ ಕಷ್ಟ ಆಗುತ್ತದೆ. 13 ವರ್ಷಗಳ ಹಿಂದಿನ ದಾಖಲೆಗಳನ್ನು ನಾನು ಪರಿಶೀಲಿಸಿದಾಗ ದಾಖಲೆಗಳು ಮಾಯಮ್ಮರವರ ಹೆಸರಿನಲ್ಲಿ ಇರಲಿಲ್ಲ ಆದರೆ ಅವರ ಗಂಡನ ಹೆಸರಿನಲ್ಲಿ ಇತ್ತು. ಆ ಸಮಯದಲ್ಲಿ ತಮ್ಮಣ್ಣರವರ ಹೆಸರು ದಾಖಲೆಗಳಲ್ಲಿ ಇತ್ತೋ ಇಲ್ಲವೋ ಎಂದು ಹೇಳಲು ನನಗೆ ನೆನಪಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ 1 ರಿಂದ 3 ಆಸ್ತಿಗಳಿಗೆ ಸಂಬಂಧಿಸಿದಂತೆ ತಮ್ಮಣ್ಣರವರಿಗೂ ಕೂಡಾ ಅರ್ಧ ಭಾಗದ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ.

4. ದಾವಾ ಶೆಡ್ಯೂಲ್ ಐಟಂ ನಂಬರ್ 1 ರಿಂದ 3 ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ಕ್ರಯ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಐಟಂ ನಂಬರ್ 2 ಆಸ್ತಿಗೆ ಸಂಬಂಧಿಸಿದ ಮೂಲ ಕ್ರಯಪತ್ರವನ್ನು ಪಡೆದುಕೊಂಡಿರುತ್ತೇನೆ. ಐಟಂ ನಂಬರ್ 1 ಮತ್ತು 3 ಅಣ್ಣಯ್ಯರವರಿಗೆ ಅವರ ತಂದೆಯಿಂದ ಬಂದಿರುತ್ತದೆ. ಅಣ್ಣಯ್ಯ ಮತ್ತು ತಮ್ಮಣ್ಣ ಇಬ್ಬರು ಸಹೋದರರು ಎಂದರೆ ನನಗೆ ಗೊತ್ತಿಲ್ಲ. ವಾದಿ ಈ ದಾವೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-6 ದಾಖಲೆಯ ಪ್ರಕಾರ ಅಣ್ಣಯ್ಯ ಮತ್ತು ತಮ್ಮಣ್ಣ ಇಬ್ಬರು ಸಹೋದರರು ಎಂದು ತಿಳಿಸಲಾಗಿರುತ್ತದೆ ಎಂದರೆ ಸರಿ .

5. ಅಣ್ಣಯ್ಯರವರು 1992-93 ರಲ್ಲಿ ಮೃತಪಟ್ಟಿರಬಹುದು. ತಮ್ಮಣ್ಣರವರು ಯಾವಾಗ ಮೃತಪಟ್ಟಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅಣ್ಣಯ್ಯ ಎಂಬುವವರಿಗೆ ವಸಂತಮ್ಮ ಮತ್ತು ಮಾಯಮ್ಮ ಎಂಬ ಹೆಸರಿನ ಇಬ್ಬರು ಹೆಂಡತಿಯರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ವಸಂತಮ್ಮ ಎಂಬುವವರನ್ನು

ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ವಸಂತಮ್ಮ ಎಂಬುವವರಿಗೆ ಹರೀಂದ್ರ ಎಂಬ ಮಗ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. 9ನೇ ಪ್ರತಿವಾದಿ ಸದರಿ ಹರೀಂದ್ರರವರ ಮಗಳು ಎಂದರೆ ನನಗೆ ಗೊತ್ತಿಲ್ಲ.

6. ದಾವಾ ಶೆಡ್ಯೂಲ್ ಐಟಂ ನಂಬರ್ 1 ರಿಂದ 3 ಆಸ್ತಿಯನ್ನು ನಾನು ಖರೀದಿಸುವ ಸಮಯದಲ್ಲಿ ಅಣ್ಣಯ್ಯ ಮತ್ತು ತಮ್ಮಣ್ಣರವರ ವಾರೀಸುದಾರರ ಬಗ್ಗೆ ಸರಿಯಾಗಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಐಟಂ ನಂಬರ್ 1 ರಿಂದ 3 ಆಸ್ತಿಗೆ ಸಂಬಂಧಿಸಿದಂತೆ ವಾದಿ, 3 ಮತ್ತು 9ನೇ ಪ್ರತಿವಾದಿಯವರಿಗೆ ಹಕ್ಕು ಇದೆ ಎಂದರೆ ಗೊತ್ತಿಲ್ಲ. ಐಟಂ ನಂಬರ್ 1 ರಿಂದ 3 ಆಸ್ತಿಗೆ ಸಂಬಂಧಿಸಿದ ಮ್ಯುಟೇಶನ್ ವಿಲ್ಲಿನ ಆಧಾರದ ಮೇರೆಗೆ ಮಾಯಮ್ಮರವರ ಹೆಸರಿಗೆ ಬದಲಾವಣೆ ಆಗಿರುತ್ತದೆ. ಸದರಿ ವೀಲುನಾಮೆಯನ್ನು ಮಾಯಮ್ಮರವರ ಗಂಡ ಮಾಡಿರುತ್ತಾರೆ. ಸದರಿ ವೀಲುನಾಮೆಯ ಬಗ್ಗೆ ನಿಡಿ-5 ಕ್ರಯಪತ್ರದಲ್ಲಿ ತಿಳಿಸಿರುವುದಿಲ್ಲ. ನಿಡಿ-9 ವೀಲುನಾಮೆ ಅಣ್ಣಯ್ಯರವರು ಮಾಡಿರುವಂತಹ ವೀಲುನಾಮೆ ಆಗಿರುವುದಿಲ್ಲ ಎಂದರೆ ಸುಳ್ಳು. ನಿಡಿ-9 ವೀಲುನಾಮೆ ನಾನು ಸೃಷ್ಟಿಸಿರುವಂತಹ ದಾಖಲೆ ಆಗಿರುತ್ತದೆ ಎಂದರೆ ಸುಳ್ಳು. ಅಣ್ಣಯ್ಯರವರಿಗೆ ಐಟಂ 1 ರಿಂದ 3 ಆಸ್ತಿಗೆ ಸಂಬಂಧಿಸಿದಂತೆ ವೀಲುನಾಮೆ ಮಾಡಲು ಸಂಪೂರ್ಣ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

7. ನಿಡಿ-5 ಕ್ರಯಪತ್ರವನ್ನು ನಾನು ಮಾಡಿಕೊಂಡಿದ್ದರೂ ಕೂಡಾ ವಾದಿಯವರಿಗೆ ಹಕ್ಕು ಹೋಗಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂಬರ್ 1 ರಿಂದ 3 ಆಸ್ತಿಗೆ ಸಂಬಂಧಿಸಿದಂತೆ ವಾರೀಸುದಾರರು ಇದ್ದರೂ ಕೂಡಾ ಅವರನ್ನು ಬಿಟ್ಟು ನಾನು

ಮೋಸದಿಂದ ನಿಡಿ-5 ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 9ನೇ ಪ್ರತಿವಾದಿ ಪರ ವಕೀಲರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.